# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 157 | Pages. 2 | Date: 29-05-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 157 - ಪುಟಗಳು : 2 | 29-05-2026 | ಶುಕ್ರವಾರ | Ph: 8762954248 | ದರ : ₹1


# ಅಕ್ಷಮಾಲ-ಧಮಾಕ ಮಸಾಲ ಪ್ರಿಮಿಕ್ಸ್ ಉತ್ಪನ್ನ

# ಮಾರುಕಟ್ಟೆಗೆ ಬಿಡುಗಡೆ-ವೆಬ್‌ಸೈಟ್‌ಗೆ ಚಾಲನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಿಳಾ ನವೋದ್ಯಮಿಗಳಾದ ಶ್ವೇತಾ ಹಾಗೂ ಶರ್ಮಿಳಾ ಪುನೀತ್ ಅವರು ಜಂಟಿಯಾಗಿ ಆರಂಭಿಸಿರುವ ಸಾಂಪ್ರದಾಯಿಕ ಆಹಾರ ತಯಾರಿಕಾ ಘಟಕಗಳಾದ ಅಕ್ಷಮಾಲ-ಧಮಾಕ ಮಸಾಲ ಹಾಗೂ ಪ್ರಿಮಿಕ್ಸ್ ಉತ್ಪನ್ನಗಳ ಬಿಡುಗಡೆ ಹಾಗೂ ವೆಬ್‌ಸೈಟ್‌ಗೆ ಚಾಲನೆ ಕಾರ್ಯಕ್ರಮ ಗುರುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ಖ್ಯಾತ ಚಲನಚಿತ್ರ, ಕಿರುತೆರೆ ನಿರ್ದೇಶಕ, ಚಿಂತಕ ಟಿ.ಎನ್.ಸೀತಾರಾಂ, ನಿರ್ಮಾಪಕಿ ಗೀತಾ ಸೀತಾರಾಂ, ಜನಪ್ರಿಯ ನಟಿ ಸುಧಾ ಬೆಳವಾಡಿ, ಲೇಖಕ, ಸೃಜನಶೀಲ ಆ್ಯಡ್ ಪ್ರೊಡ್ಯೂಸರ್ ಎಂ.ಜಿ.ಸತ್ಯರಾವ್ ಅವರು ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಿದರು ಹಾಗೂ ಅಕ್ಷಮಾಲ ಫುಡ್ ಅಂಡ್ ಬಿವರೇಜಸ್ ಮತ್ತು ಧಮಾಕ ಮಸಾಲ ವೆಬ್ ಸೈಟ್ ಗಳನ್ನು ಲೋಕಾರ್ಪಣೆ ಮಾಡಿದರು.

ಟಿ.ಎನ್ ಸೀತಾರಾಮ್ ಅವರು ಮಾತನಾಡಿ, ಹಾಸನದ ಹೆತ್ತೂರು ನಾಗರಾಜ್ ಅವರು ತಮ್ಮ ಬರಹಗಳ ಮೂಲಕ ಗಮನ ಸೆಳೆದು ನನ್ನ ಆತ್ಮೀಯರಾಗಿದ್ದರು. ಈಚೆಗೆ ನಾನು ಫ್ರೀಡಂ ಚಲನಚಿತ್ರದ ಚಿತ್ರೀಕರಣಕ್ಕಾಗಿ ಮತ್ತೆ ಹಾಸನಕ್ಕೆ ಬಂದಿದ್ದೆ. ಚಿತ್ರದ ನಿರ್ದೇಶಕ ಮಂಜು ಬನವಾಸೆ, ಅವರ ಪತ್ನಿ ಶ್ವೇತಾ, ಪಾಲುದಾರರಾದ ಶರ್ಮಿಳಾ ಪುನೀತ್ ಅವರು ನಮಗೆ ಆತ್ಮೀಯರಾಗಿದ್ದಾರೆ. ನನ್ನ ಮಾಯಾಮೃಗ ಧಾರಾವಾಹಿಯಲ್ಲಿ ನಾಯಕಿ ಸ್ವಾವಲಂಬಿಯಾಗಲು ಆಹಾರೋದ್ಯಮ ಆರಂಭಿಸುತ್ತಾರೆ. ಇಲ್ಲಿಯೂ ಶ್ವೇತಾ ಹಾಗೂ ಶರ್ಮಿಳಾ ಅವರು ಆಹಾರೋದ್ಯಮ ಆರಂಭಿಸಿದ್ದಾರೆ. ನನ್ನ ಧಾರಾವಾಹಿ ಪಾತ್ರಗಳು ಸ್ತ್ರೀಯರ ಪರವಾದ ನಿಲುವುಗಳನ್ನು ಹೊಂದಿರುತ್ತವೆ. ಇಲ್ಲಿಯೂ ಈ ಇಬ್ಬರು ಮಹಿಳೆಯರಿಗೆ ಯಶಸ್ಸು ದೊರೆಯಲಿ ಎಂದು ಹಾರೈಸಿದರು.

ಇಂದಿನ ತಾಯಂದಿರಿಗೆ ಅನುಕೂಲ ಆಗಲಿ ಎಂದು ಶ್ವೇತಾ ಮತ್ತು ಶರ್ಮಿಳಾ ಅವರು ಸಾಂಪ್ರದಾಯಿಕ ಇನ್ಸ್ಟೆಂಟ್ ಫುಡ್ ತಯಾರು ಮಾಡಿರುವುದು ತುಂಬಾ ಒಳ್ಳೆಯ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ವೇತಾ ಅವರದ್ದು ಧಾರಾಳ ಮನಸ್ಸು, ಅಂತೆಯೇ ಈ ಉದ್ಯಮವೂ ಅಷ್ಟೇ ಧಾರಾಳವಾಗಿ ಬೆಳೆಯಲಿ, ಬೆಳಗಲಿ ಎಂದು ಹಾರೈಸಿದರು.


ಹಾಸನದಲ್ಲಿ ಸುಂದರವಾದ ನೆನಪು, ಸುಂದರ ಮನಸು ಇವೆ. ನಾವು ಮುಕ್ತ ಮುಕ್ತ ಧಾರಾವಾಹಿ ಸಂವಾದ ಆಯೋಜಿಸಿದಾಗ ಪೊಲೀಸರು ಕರೆ ಮಾಡಿ ನಿಮ್ಮ ಪಾಸ್ ಗಳಿಗಾಗಿ ಕಿತ್ತಾಟ ನಡೆಯುತ್ತಿದ್ದು ನಿಮ್ಮಿಂದಾಗಿ ಲಾಠಿ ಚಾರ್ಜ್ ಮಾಡಬೇಕಾಗುತ್ತದೆ ಎಂದಿದ್ದರು. ಇಲ್ಲಿನ ಸಂವಾದದಲ್ಲಿ ಮಹಿಳೆಯೊಬ್ಬರು ನೀವು ಒಂಭತ್ತು ಗಂಟೆಗೆ ಧಾರವಾಹಿ ಆರಂಭಿಸುತ್ತಿರುವುದರಿಂದ ನನ್ನ ಗಂಡ ಕ್ಲಬ್ ಗೆ ಹೋಗುವುದನ್ನು ನಿಲ್ಲಿಸಿ ಆ ಸಮಯದಲ್ಲಿ ಧಾರವಾಹಿ ನೋಡುತ್ತಿದ್ದಾರೆ ಎಂದಿದ್ದರು ಎಂದು ನೆನಪು ಮಾಡಿಕೊಂಡರು. ನಾವು ಹೇಗೆ ತೆಗೆದುಕೊಳ್ಳುತ್ತೇವೆಯೋ, ಸ್ವೀಕರಿಸುತ್ತೇವೆಯೋ ಹಾಗೆ ಬದುಕು ಸಂತೋಷವಾಗಿರುತ್ತದೆ ಎಂದರು.

ಮಂಜು ಬನವಾಸೆ ಮಾತನಾಡಿ, ಈ ವಿಶೇಷ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಹೊಣೆ ಹೊತ್ತಿರುವ ಶ್ವೇತಾ, ಶರ್ಮಿಳಾ ಅವರು ಮಹಿಳಾ ಉದ್ಯೋಗಿಗಳೊಂದಿಗೆ ಹಗಲು-ರಾತ್ರಿ ಶ್ರಮ ಹಾಕುತ್ತಿದ್ದಾರೆ. ಮಹಿಳಾ ಸ್ವಾವಲಂಬನೆಯ ಭಾಗವಾಗಿರುವ ಉದ್ಯಮವನ್ನು ಪ್ರೋತ್ಸಾಹಿಸಲು ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಲೋಕದ ರಾಯಭಾರಿಗಳೇ ಇಲ್ಲಿಗೆ ಆಗಮಿಸಿರುವುದು ನಮ್ಮ ಅದೃಷ್ಟ ಎಂದರು.

ಕಾರ್ಯಕ್ರಮದಲ್ಲಿ ಉದ್ಯಮದ ಮಾಲೀಕರಾದ ಶ್ವೇತಾ ಮಂಜು ಬನವಾಸೆ, ಶರ್ಮಿಳಾ ಪುನೀತ್, ಉದ್ಯಮಿ ಪುನೀತ್, ಕುಟುಂಬ ಸದಸ್ಯರು, ಹಿತೈಷಿಗಳು, ಪತ್ರಕರ್ತರು, ನಟರಾದ ಮದನ್ ಹಾಸನ್, ಸ್ಕಂದ ಮಂಜು ಮುಂತಾದವರು ಇದ್ದರು.




> ನನಗೆ ಹಾಸನ ಅತ್ಯಂತ ಪ್ರಿಯವಾದ ಊರು. ನನ್ನ ಕಾಲೇಜು ದಿನಗಳಲ್ಲಿ ಹಾಸ್ಟೆಲ್ ನಲ್ಲಿ ಒಂದೇ ಕೊಠಡಿಯಲ್ಲಿದ್ದ, ನನ್ನಲ್ಲಿ ಕಾವ್ಯದ ಸೆಳೆದ ಮೂಡಿಸಿದ, ಕುಮಾರವ್ಯಾಸನ ಕಾವ್ಯ ಪರಿಚಯಿಸಿದ ಖ್ಯಾತ ವಿಮರ್ಶಕ ಕಿರಂ ನಾಗರಾಜ್ ಅವರು ಇಲ್ಲಿನ ಕಿತ್ತಾನೆಯವರು. ನನ್ನ ಮೊದಲ ಚಲನಚಿತ್ರ ಮತದಾನದ ನಿರ್ಮಾಪಕರೂ ಹಾಸನದ ನಾರಾಯಣ್ ಅವರು. ಆ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರಕಿತು.
>
> **- ಟಿ.ಎನ್. ಸೀತಾರಾಮ್**



## ಧಮಾಕ ಆಹಾರೋತ್ಪನ್ನಗಳು ಯಶಸ್ಸು ಗಳಿಸಲಿ ಎಂ.ಜಿ.ಸತ್ಯರಾವ್



ಲೇಖಕ, ನಿರ್ಮಾಪಕ ಎಂ.ಜಿ.ಸತ್ಯರಾವ್ ಮಾತನಾಡಿ, ಹಾಸನ ನನ್ನ ಊರು, ನಾನು ಆಡಿ ಬೆಳೆದ ಊರು. ಖ್ಯಾತ ವಿಮರ್ಶಕ ಕಿರಂ ನಾಗರಾಜ್ ನನ್ನ ಮಾವ. ನಮ್ಮ ಕುಟುಂಬದ ಎಲ್ಲ ಮಕ್ಕಳು ಬೇರೆ ಊರುಗಳಲ್ಲಿ ಬೆಳೆದರು. ವ್ಯಾಪಾರೋದ್ಯಮಿಗಳಾದರು. ಆದರೆ ಅಂತಹ ಕುಟುಂಬದ ಕಿರಂ ನಾಗರಾಜ್ ಅವರು ಸಾಹಿತ್ಯದ ಕಡೆಗೆ ವಾಲಿ ವಿಮರ್ಶಕರಾಗಿ ಬೆಳೆಯಲು ಹಾಸನದ ವಾತಾವರಣ, ಆಹಾರ ಕಾರಣವಾಗಿದೆ. ಈಗ ಅಕ್ಷಮಾಲ, ಧಮಾಕ ಆಹಾರೋತ್ಪನ್ನಗಳು ಉತ್ತಮ ಮಾರುಕಟ್ಟೆ ಪಡೆದು ಯಶಸ್ಸು ಗಳಿಸಲಿ ಎಂದು ಹಾರೈಸಿದರು.

## ಕಲಬೆರಕೆ ಆಹಾರ ತ್ಯಜಿಸಿ-ಧಮಾಕ ಉತ್ಪನ್ನ ಬಳಸಿ

ನಟಿ ಸುಧಾ ಬೆಳವಾಡಿ ಮಾತನಾಡಿ, ಮನೆಯಲ್ಲಿ ನಾವು ಏನೇ ಅಡುಗೆ ಮಾಡಿದರೂ ಮಕ್ಕಳಿಗೆ ಹೊರಗಿನದೇ ಊಟ, ತಿಂಡಿ ಬೇಕು ಎನ್ನುವಷ್ಟು ಆಹಾರ ಸಂಸ್ಕೃತಿ ಬದಲಾಗಿದೆ.

ಮನೆಯಲ್ಲಿ ಅಡುಗೆ ತಯಾರಾಗಿದ್ದರೂ ಅವರು ಫುಡ್ ಡೆಲಿವರಿ ಕಂಪೆನಿಗಳ ಮೂಲಕ ಹೋಟೆಲ್ ಖಾದ್ಯ ತರಿಸಿಕೊಳ್ಳುತ್ತಾರೆ ಎಂದು ಬೇಸರ ಹೊರ ಹಾಕಿದರು. ಇಂದು ಧಮಾಕ ಸಾಂಪ್ರದಾಯಿಕ ಅಡುಗೆ ಉತ್ಪನ್ನಗಳನ್ನು ತಯಾರು ಮಾಡುವ ಹೊಣೆಯನ್ನು ಇಬ್ಬರು ಹೆಣ್ಣು ಮಕ್ಕಳು ಹೊತ್ತಿರುವುದು ಸಂತೋಷದಾಯಕ. ಹೆಣ್ಣು ಮಕ್ಕಳು ಅಡುಗೆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಅಕ್ಷಮಾಲ, ಧಮಾಕ ಉತ್ಪನ್ನವೂ ಹಾಗೆಯೇ ಇರಲಿದೆ ಎಂದರು. ಇಂದು ನಾವು ತಿನ್ನುವ ಬಹುತೇಕ ಆಹಾರ ಕಲಬೆರಕೆಯಿಂದ ಕೂಡಿದೆ. ಹಾಗಾಗಿ ಆರೋಗ್ಯವೇ ಭಾಗ್ಯ ಅನ್ನೋ ಪದ ಈಗ ಅರ್ಥ ಆಗುತ್ತಿದೆ. ಅದಕ್ಕೆ ವ್ಯತಿರಿಕ್ತವಾಗಿ ಸಾಂಪ್ರದಾಯಿಕ ರೀತಿಯಲ್ಲಿ ಎಲ್ಲ ರೀತಿಯ ಅಡುಗೆ ಉತ್ಪನ್ನ ತಯಾರು ಮಾಡಿರುವುದು ಸ್ವಾಗತಾರ್ಹ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು. ಇದು ತುಂಬಾ ಒಳ್ಳೆಯ ಕೆಲಸ, ಉತ್ಪನ್ನ ಉತ್ತಮವಾಗಿ ಬೆಳೆಯಲಿ ಎಂದು ಹರಸಿದರು.

## ಅಕ್ಷಮಾಲ ಮತ್ತು ಧಮಾಕ ಉತ್ಪನ್ನಗಳ ಬಗ್ಗೆ ಒಂದಿಷ್ಟು







ನಮ್ಮ ಬದುಕಿನ ಹಾದಿಯ ಸಂಸ್ಕೃತಿ ಮತ್ತು ಆಹಾರ ಸಂಸ್ಕೃತಿ ಎಂದಿಗೂ ಬೇರೆ ಬೇರೆಯಾಗಿದ್ದೇ ಇಲ್ಲ. ಅಷ್ಟರಮಟ್ಟಿಗೆ ಆಹಾರವೂ ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಆದರೆ ಆಧುನಿಕತೆ ಹೆಚ್ಚಿದಂತೆ ಮೈಕ್ರೋ ಫ್ಯಾಮಿಲಿಯ ಇಬ್ಬರೂ ದುಡಿಮೆಗೆ ಹೆಚ್ಚಿನ ಸಮಯ ಮೀಸಲಿಡಬೇಕಾದ ಅನಿವಾರ್ಯತೆ ಸೃಷ್ಟಿಯಾದಾಗ, ಅಡುಗೆಗೆ ಬೇಕಾದ ಸಮಯ ಕಡಿತಗೊಳ್ಳಲಾರಂಭಿಸಿತು. ಅದರ ಪರಿಣಾಮವಾಗಿ ನೂರಾರು ವರ್ಷಗಳಿಂದ ನಮ್ಮ ಸಂಸ್ಕೃತಿಯ ಭಾಗವಾಗಿದ್ದ ಸಾಂಪ್ರದಾಯಿಕ ಆಹಾರ ಪದ್ಧತಿ ನಡುವೆ ದಿಡೀರ್ ತಯಾರಾಗುವ ಅನುಕೂಲ ಹೊಂದಿದ್ದ ಪಾಶ್ಚಿಮಾತ್ಯ ಆಹಾರ ಕ್ರಮ ನಮ್ಮ ಬದುಕಿನೊಳಗೆ ಪ್ರವೇಶ ಪಡೆಯಿತು.




ಅದು ಹೆಲ್ದಿಯೇ, ಅನ್ ಹೆಲ್ದಿಯೇ ಎಂದು ಪರಿಶೀಲಿಸುವ ಸಂಯಮವೂ ಈ ವೇಗದ ಜಗತ್ತಿನಲ್ಲಿ ಇಲ್ಲವಾಯಿತು. ಒಂದು ಆಹಾರ ಸಂಸ್ಕೃತಿಯ ನಾಶ ನಮ್ಮ ಜೀವನ ಸಂಸ್ಕೃತಿಯ ಒಂದು ಪ್ರಮುಖ ಭಾಗಕ್ಕೆ ಹತ್ತಿದ ಗೆದ್ದಲಿನಂತೆಯೇ ಅಪಾಯಕಾರಿಯಾಗಿದೆ. ಪರೋಕ್ಷವಾಗಿ ಇದು ನಮ್ಮ ಸಾಂಪ್ರದಾಯಿಕ ಆಹಾರ ಪದಾರ್ಥಗಳ ಮೂಲವಾದ ಕೃಷಿ ವ್ಯವಸ್ಥೆಯ ಮೇಲಿನ ಪ್ರಹಾರವೂ ಆಗಿದೆ. ಇಂತಹ ಸಮಯದಲ್ಲಿ ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯ ಹಾದಿಗೆ ಇನ್‌ಸ್ಟ್ಯಾಂಟ್ ಆಹಾರ ಪ್ರಿಯರನ್ನು ಮರಳಿ ಕರೆತರುವ, ಸ್ಥಳೀಯ ಕೃಷಿ ಉತ್ಪನ್ನಗಳ ಮೌಲ್ಯ ವರ್ಧನೆ ಮೂಲಕ ರೈತರಿಗೆ ಪರೋಕ್ಷವಾಗಿ ನೆರವಾಗಬೇಕು, ಸ್ಥಳೀಯ ಮಹಿಳೆಯರಿಗೆ ಉದ್ಯೋಗಾವಕಾಶ ಸೃಷ್ಟಿಸಬೇಕು ಎನ್ನುವ ಆಲೋಚನೆಯಿಂದ ಹುಟ್ಟಿಕೊಂಡಿರುವ ಆಹಾರ ಸಂಸ್ಕರಣಾ ಘಟಕಗಳೇ ಅಕ್ಷಮಾಲ ಫುಡ್ ಅಂಡ್ ಬಿವರೇಜಸ್ ಹಾಗೂ ಧಮಾಕ ಮಸಾಲ!

ಪತ್ರಕರ್ತೆಯಾಗಿದ್ದ ಶ್ವೇತಾ ಮಂಜುನಾಥ್ ಅವರು ಆರು ವರ್ಷಗಳ ಹಿಂದೆ ಗೃಹೋದ್ಯಮವಾಗಿ ಆರಂಭಿಸಿದ ಅಕ್ಷಮಾಲ ಫುಡ್ ಅಂಡ್ ಬಿವರೇಜಸ್ ಇಂದು ಅಕ್ಕಿ, ಹಲಸು, ಜೀರಿಗೆ, ಪಾಲಕ್, ಟೊಮ್ಯಾಟೋ, ಸಿರಿ ಧಾನ್ಯಗಳು ಸೇರಿದಂತೆ 24 ವಿವಿಧ ಬಗೆಯ ಹಪ್ಪಳ, ಸಂಡಿಗೆ, ವಿವಿಧ ರೀತಿಯ ಉಪ್ಪಿನಕಾಯಿಗಳನ್ನು ಉತ್ಪಾದಿಸುವ ಸಂಸ್ಥೆಯಾಗಿ ಬೆಳೆದಿದೆ. ಹತ್ತಾರು ಮಹಿಳೆಯರಿಗೆ ಉದ್ಯೋಗ ಒದಗಿಸಿದೆ.

ಅದರ ಮುಂದುವರಿದ ಭಾಗವಾಗಿ ಜನ್ಮತಾಳಿರುವ ಧಮಾಕ ಮಸಾಲ ಆಹಾರೋತ್ಪನ್ನ ತಯಾರಿಕಾ ಘಟಕ ಈಗ ಇಬ್ಬರು ತಾಯಂದಿರ ಆಹಾರ, ಆರೋಗ್ಯ ಕಾಳಜಿಯ ಪ್ರತೀಕವೂ ಆಗಿದೆ.

ಈಗ ಶ್ವೇತಾ ಅವರೊಂದಿಗೆ ಶರ್ಮಿಳಾ ಪುನೀತ್ ಅವರು ಕೈಜೋಡಿಸಿದ್ದು ಅವರಿಬ್ಬರ ಪಾಲುದಾರಿಕೆಯ ಧಮಾಕ ಮಸಾಲ ಈಗ ಇನ್‌ಸ್ಟ್ಯಾಂಟ್ ಆಹಾರ ಪ್ರಿಯರನ್ನು ಪಾಶ್ಚಿಮಾತ್ಯ ಆಹಾರಗಳಿಂದ ನಮ್ಮ ಸಾಂಪ್ರದಾಯಿಕ ಆಹಾರಗಳ ಕಡೆಗೆ ಅದೇ ಇನ್‌ಸ್ಟ್ಯಾಂಡ್ ಮಾದರಿಯಲ್ಲೇ ಕರೆತರುವ ಪ್ರಯತ್ನವಾಗಿ ಹಲವು ಪ್ರಿಮಿಕ್ಸ್ ಗಳನ್ನು ಇಂದು ನಾಡಿನ ಸಂಸ್ಕೃತಿ, ಪರಂಪರೆಯ ಹೆಮ್ಮೆಯ ರಾಯಭಾರಿಗಳ ಉಪಸ್ಥಿತಿಯಲ್ಲಿ ಮಾರುಕಟ್ಟೆಗೆ ಪರಿಚಯಿಸಿದೆ.



## ಮೂರು ದಿನ ಅರಸೀಕೆರೆ ಚಾಂಪಿಯನ್ಸ್ ಕಪ್ ಟೂರ್ನಿಮೆಂಟ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ : ಜೆಕೆ ಪ್ರೆಸೆಂಟ್ ವತಿಯಿಂದ ಮೇ 29 ರಿಂದ 31 ರವರೆಗೆ ನಡೆಯುತ್ತಿರುವ ಅರಸೀಕೆರೆ ಚಾಂಪಿಯನ್ಸ್ ಕಪ್ ಟೂರ್ನ ಮೆಂಟನ್ನು ವ್ಯವಸ್ಥಿತವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜೆಕೆ ಕ್ರಿಕೆಟರ್ಸ್‌ನ ಶಿವು ಮತ್ತು ಚೇತನ್ ಹೇಳಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಂಟು ಫ್ರಾಂಚೈಸಿ ತಂಡಗಳು ಹಾಗೂ ಎಂಟು ಅಫೀಷಿಯಲ್ ತಂಡಗಳು ಸೇರಿ ಒಟ್ಟು 16 ತಂಡಗಳು ಚಾಂಪಿಯನ್ ಕಪ್ ಗಾಗಿ ಹೋರಾಟ ನಡೆಸಲಿವೆ ಎಂದು ಮಾಹಿತಿ ನೀಡಿದರು.

ತಾಲೂಕಿನ ಒಬ್ಬ ಐಕಾನ್ ಆಟಗಾರ ಸೇರಿದಂತೆ ಜಿಲ್ಲೆಯ ಇಬ್ಬರು ಮತ್ತು ನೆರೆಯ ತಾಲೂಕು ತಿಪಟೂರಿನಿಂದ ಒಬ್ಬರು



ಹೀಗೆ ಒಂದು ತಂಡಕ್ಕೆ ನಾಲ್ಕು ಐಕಾನ್ ಆಟಗಾರರನ್ನು ಹಂಚಿಕೆ ಮಾಡಲಾಗಿದ್ದು, ಉಳಿದ ಆಟಗಾರರನ್ನು ಆಯಾ ತಂಡದ ಫ್ರಾಂಚೈಸಿಗಳು ಪಾಯಿಂಟ್ ಬಿಡ್ ಮೂಲಕ ಆಯ್ಕೆ ಮಾಡಿಕೊಂಡಿದ್ದಾರೆ. ಅದೇ ರೀತಿ ಪೊಲೀಸ್ ಇಲಾಖೆ ಸೇರಿದಂತೆ ನಾನಾ ಇಲಾಖೆಯ ಅಧಿಕಾರಿಗಳ ತಂಡ ಟ್ರೋಫಿಗಾಗಿ ತೀವ್ರ ಪೈಪೋಟಿ ನಡೆಸಲಿವೆ ಎಂದರು.

ಕ್ರೀಡಾಕೂಟದ ಚಾಂಪಿಯನ್ಸ್ ಆಗಿ ಹೊರ ಹೊಮ್ಮುವ ತಂಡ ಆಕರ್ಷಕ ಟ್ರೋಫಿಯೊಂದಿಗೆ 1 ಲಕ್ಷ ನಗದು ಬಹುಮಾನ ಪಡೆದರೆ ರನ್ನರ್ಸ್ ತಂಡ ಟ್ರೋಫಿಯೊಂದಿಗೆ 50, ಸಾವಿರ ಬಹುಮಾನ ಇದೇ ರೀತಿ ಮೂರು ಮತ್ತು ನಾಲ್ಕನೇ ಸ್ಥಾನಕ್ಕೆ ಭಾಜನವಾಗುವ ತಂಡಗಳು ಟ್ರೋಫಿಯೊಂದಿಗೆ ಸಮಾಧಾನಕರ ಬಹುಮಾನ ಪಡೆಯಲಿವೆ ಎಂದು ಮಾಹಿತಿ ನೀಡಿದರು.

ನಗರದ ರೈಲ್ವೆ ಮೈದಾನದಲ್ಲಿ ನಡೆಯುವ ಈ ಕ್ರಿಕೆಟ್ ಹಬ್ಬವು ಸಾಮಾಜಿಕ ಜಾಲತಾಣಗಳಲ್ಲಿ ಲೈವ್ ನೋಡಬಹುದಾಗಿದೆ ಎಂದ ಅವರು, ತಾಲೂಕಿನ ಹಿರಿಯ ಕ್ರಿಕೆಟ್ ಆಟಗಾರರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಅರಸೀಕೆರೆ ಚಾಂಪಿಯನ್ ಕಪ್ ಟೂರ್ನಮೆಂಟ್‌ನ್ನು ಯಶಸ್ವಿಗೊಳಿಸಿಕೊಡುವಂತೆ ಮನವಿ ಮಾಡಿದರು.

## ವಿದ್ಯುತ್ ಸಮಸ್ಯೆ ಕೇಳೋರಿಲ್ಲವೇ? ಇನ್ಮೇಲೆ ಚಿಂತೆ ಬಿಡಿ ಕಾಲ್ ಮಾಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಸಕಲೇಶಪುರ ಕಾರ್ಯ ಮತ್ತು ಪಾಲನಾ ವಿಭಾಗ ವ್ಯಾಪ್ತಿಯಲ್ಲಿ ಬರುವ ಆಲೂರು, ಬೇಲೂರು ಮತ್ತು ಸಕಲೇಶಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು ಮತ್ತು ಮಳೆಗಾಲದಲ್ಲಿ ಉಂಟಾಗುವ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಲುವಾಗಿ, ಗ್ರಾಹಕರು/ಸಾರ್ವಜನಿಕರು ಕುಂದುಕೊರತೆಗಳನ್ನು ಬಗೆಹರಿಸಿಕೊಳಲು ಶಾಖಾಧಿಕಾರಿಗಳ ಮತ್ತು ಅಧಿಕಾರಿಗಳ ಮೊಬೈಲ್ ದೂರವಾಣಿ ಸಂಖ್ಯೆಗಳನ್ನು ನೀಡಲಾಗಿದೆ ಎಂದು ಸಕಲೇಶಪುರ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ತಾಲ್ಲೂಕು ಮತ್ತು ದೂರವಾಣಿ ಸಂಖ್ಯೆ :- ಗ್ರಾಹಕರ ಸೇವಾ ಕೇಂದ್ರ (ಟೋಲ್ ಫ್ರೀ ನಂಬರ್) ದೂರವಾಣಿ ಸಂಖ್ಯೆ : 19129448991912, ಆಲೂರು 24ಫ7 ಸರ್ವಿಸ್ ಸ್ಟೇನ್ ಕಿರಿಯ ಇಂಜಿನಿಯರ್ 9480810331, ಆಲೂರು ಟೌನ್ ಶಾಖೆ ಸಹಾಯಕ ಇಂಜಿನಿಯರ್ 9448994956, ಪಾಳ್ಯ ಶಾಖೆ ಕಿರಿಯ ಇಂಜಿನಿಯರ್ 9449598632, ಮಗ್ಗೆ ಶಾಖೆ ಕಿರಿಯ ಇಂಜಿನಿಯರ್ 9445994955, ಆಲೂರು ಉಪವಿಭಾಗ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ 9448994954. ಬೇಲೂರು ಟೌನ್ ಶಾಖೆ ಸಹಾಯಕ ಇಂಜಿನಿಯರ್ 9448994951, ಹಳೇಬೀಡು ಶಾಖೆ ಕಿರಿಯ ಇಂಜಿನಿಯರ್ 9448994952.

# ಹಿಮ್ಸ್‌ಗೆ ದಿಢೀರ್ ಭೇಟಿ : ಆಸ್ಪತ್ರೆ ಕಾರ್ಯವೈಖರಿ ವ್ಯವಸ್ಥೆ ಬಗ್ಗೆ ಜಿಪಂ ಸಿಇಒ ಮೆಚ್ಚುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**




ಹಾಸನ: ಜಿಲ್ಲೆಯ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಖುದ್ದಾಗಿ ಪರಿಶೀಲಿಸುವ ಉದ್ದೇಶದಿಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲ ಅವರು ಇಂದು ಹಿಮ್ಸ್ ಮಕ್ಕಳ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಸುಮಾರು 3 ಗಂಟೆಗಳಿಗೂ ಹೆಚ್ಚು ಕಾಲ ವಿವಿಧ ವಿಭಾಗಗಳನ್ನು ಪರಿಶೀಲಿಸಿದರು. ಬಕ್ರೀದ್ ಹಬ್ಬದ ಪ್ರಯುಕ್ತ ಸರ್ಕಾರಿ ರಜೆ ಇದ್ದರೂ ಸಹ ಆಸ್ಪತ್ರೆಗೆ ಆಗಮಿಸಿ ವೈದ್ಯಕೀಯ ಸೇವೆಗಳ ಬಗ್ಗೆ ಮಾಹಿತಿ ಪಡೆದುಕೊಂಡ ಅವರು, ಆಸ್ಪತ್ರೆ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆಸ್ಪತ್ರೆಯ ಪ್ರಯೋಗಾಲಯ, ಐಸಿಯು, ಓಪಿಡಿ, ಐಪಿಡಿ, ನವಜಾತ ಶಿಶು ಘಟಕ, ಸಮಾಲೋಚನಾ ವಿಭಾಗ ಸೇರಿ ವಿವಿಧ ವಿಭಾಗಗಳಿಗೆ ತೆರಳಿದ ಅವರು, ಸೌಲಭ್ಯಗಳು, ಚಿಕಿತ್ಸಾ ಕ್ರಮಗಳು, ಸ್ವಚ್ಛತೆ ಹಾಗೂ ಸಿಬ್ಬಂದಿಯ ಕಾರ್ಯನಿರ್ವಹಣೆ ಅವಲೋಕಿಸಿದರು. ಪ್ರತಿಯೊಂದು ವಿಭಾಗದಲ್ಲಿಯೂ ವೈದ್ಯರು, ಸಿಬ್ಬಂದಿ ಹಾಗೂ ರೋಗಿಗಳ ಕುಟುಂಬ ಸದಸ್ಯರೊಂದಿಗೆ ಚರ್ಚಿಸಿ ಇಲ್ಲಿನ ಸಮಸ್ಯೆ, ಅವಶ್ಯಕತೆ ಮತ್ತು ಸುಧಾರಣೆಗೆ ಬೇಕಾದ ಅಂಶಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು.

ಪರಿಶೀಲನೆ ಬಳಿಕ ಮಾತನಾಡಿದ ಅವರು, ಹಿಮ್ಸ್ ಮಕ್ಕಳ ಆಸ್ಪತ್ರೆಯಲ್ಲಿ ದೊರೆಯುತ್ತಿರುವ ಸೇವೆ ಮತ್ತು ಸೌಲಭ್ಯ ನೋಡಿದಾಗ ಕೆಲವೊಂದು ವಿಷಯಗಳಲ್ಲಿ ಖಾಸಗಿ ಆಸ್ಪತ್ರೆಗಳಿಗಿಂತ ಉತ್ತಮ ಸೌಲಭ್ಯ, ವ್ಯವಸ್ಥೆ ಇಲ್ಲಿವೆ ಎಂದು ಹೇಳಬಹುದು.

ವಿಶೇಷವಾಗಿ ಸ್ವಚ್ಛತೆ, ಮಕ್ಕಳ ಮತ್ತು ತಾಯಿ ಆರೈಕೆ ಮತ್ತು ವೈದ್ಯಕೀಯ ಸೇವೆಗಳ ವ್ಯವಸ್ಥೆ ಗಮನ ಸೆಳೆಯುವಂತಿದೆ. ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು

ಹಾಗೂ ಸಿಬ್ಬಂದಿಯಿಂದ ಕೆಲ ಮೂಲಭೂತ ಸೌಲಭ್ಯಗಳ ಬೇಡಿಕೆ ಮತ್ತು ಸಮಸ್ಯೆ ನಿವಾರಣೆಗೆ ಬಗ್ಗೆ ಮನವಿ ಬಂದಿದ್ದು, ಅವುಗಳನ್ನು ಪರಿಶೀಲಿಸಿ ಯಾವ ಯೋಜನೆ ಅಥವಾ ಅನುದಾನದಡಿ ಸೌಲಭ್ಯ ಕಲ್ಪಿಸಬಹುದು ಎಂಬುದರ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನಷ್ಟು ಉತ್ತಮ ಸೇವೆ ನೀಡುವ ಉದ್ದೇಶದಿಂದ ಪ್ರತಿಯೊಂದು ಅಂಶವನ್ನೂ ಗಮನಿಸಲಾಗುತ್ತಿದೆ. ವಿಶೇಷವಾಗಿ ತಾಯಂದಿರು ಮತ್ತು ಮಕ್ಕಳಿಗೆ ಗುಣಮಟ್ಟದ ಆರೋಗ್ಯ ಸೇವೆ ದೊರಕಬೇಕು ಎಂಬುದು ಸರ್ಕಾರದ ಆದ್ಯತೆ ಎಂದರು.

ಶಿಶು ಮರಣ ಪ್ರಮಾಣ ಕಡಿಮೆ ಮಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ತಾಯಂದಿರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ವ್ಯವಸ್ಥೆ, ನವಜಾತ ಶಿಶುಗಳ ಆರೈಕೆ ಹಾಗೂ ಪೌಷ್ಟಿಕತೆ ಸಂಬಂಧಿತ ವಿಚಾರಗಳ ಕುರಿತು ವೈದ್ಯರೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ಹೇಳಿದರು.

ಕೆಲವು ವಿಭಾಗಗಳಲ್ಲಿ ಇನ್ನೂ ಅಭಿವೃದ್ಧಿ ಅಗತ್ಯವಿದೆ. ಅವುಗಳನ್ನು ಹಂತ ಹಂತವಾಗಿ ಸುಧಾರಿಸುವ ಕಾರ್ಯ ನಡೆಯಲಿದೆ ಎಂದರು.

ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಆಸ್ಪತ್ರೆಗೆ ಭೇಟಿ ನೀಡುವುದಾಗಿ ತಿಳಿಸಿದ ಅವರು, ಮುಂದಿನ ಬಾರಿ ಪೂರ್ವ ಸೂಚನೆ ಇಲ್ಲದೆ ಅನಿರೀಕ್ಷಿತ ಭೇಟಿ ನೀಡುತ್ತೇನೆ. ಆ ವೇಳೆ ಸೇವೆಗಳ ಸ್ಥಿತಿಗತಿ ಹೇಗಿದೆ ಎಂಬುದನ್ನು ಮತ್ತೆ ಪರಿಶೀಲಿಸಲಾಗುತ್ತದೆ ಎಂದು ಹೇಳಿದರು.

ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆ ಇರುವುದನ್ನು ಒಪ್ಪಿಕೊಂಡ ಅವರು, ಕೆಲ ವಿಭಾಗಗಳಲ್ಲಿ ಸಿಬ್ಬಂದಿ ಕೊರತೆ ಕಂಡು ಬಂದಿದೆ. ಈ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು. ಅಗತ್ಯ ಇರುವ ಕಡೆ ಮಾನವ ಸಂಪನ್ಮೂಲ ಒದಗಿಸುವ ಬಗ್ಗೆ ಪರಿಶೀಲನೆ ನಡೆಯಲಿದೆ ಎಂದರು. ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸರ್ಕಾರಿ ಸೂಪರ್ ಸ್ಪಷಾಲಿಟಿ ಆಸ್ಪತ್ರೆ ಇನ್ನೂ ಸಾರ್ವಜನಿಕ ಸೇವೆಗೆ ಲಭ್ಯವಾಗದಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿ, ಶೀಘ್ರದಲ್ಲೇ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ. ನಾವೂ ಸಹ ಬೇಗ ಆರಂಭಿಸಬೇಕು ಎಂಬ ಉದ್ದೇಶ ಹೊಂದಿದ್ದೇವೆ. ಅನವಶ್ಯಕ ವಿಳಂಬದಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತದೆ. ಆದ್ದರಿಂದ ಕಾಮಗಾರಿ ಪ್ರಕ್ರಿಯೆಗಳನ್ನು ವೇಗಗೊಳಿಸಲಾಗುತ್ತಿದೆ ಎಂದು ತಿಳಿಸಿದರು. ಸರ್ಕಾರಿ ಆಸ್ಪತ್ರೆಯ ಕಾರ್ಯವೈಖರಿ ನಮಗೆ ತೃಪ್ತಿ ತಂದಿದೆ.

ದೊಡ್ಡ ಮಟ್ಟದ ಸಮಸ್ಯೆ ಇಲ್ಲ. ಕೆಲವು ಸಣ್ಣಪುಟ್ಟ ಅಡಚಣೆ ಸರಿಪಡಿಸಿಕೊಳ್ಳಬೇಕಾಗಿದೆ. ಆಸ್ಪತ್ರೆಗೆ ಬಂದ ತಾಯಂದಿರ ಜೊತೆಗೂ ಮಾತನಾಡಿದ್ದೇವೆ. ಅವರು ಕೂಡ ಇಲ್ಲಿನ ಸೇವೆ ಮತ್ತು ಸೌಲಭ್ಯಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಹಲವರು ಖಾಸಗಿ ಆಸ್ಪತ್ರೆಗಿಂತ ಇಲ್ಲಿನ ಸೇವೆ ಉತ್ತಮವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಎಂದು ಹೇಳಿದರು. ಈ ವೇಳೆ ಡಿಹೆಚ್‌ಒ ಡಾ. ಅನಿಲ್ ಕುಮಾರ್, ಹಿಮ್ಸ್ ನಿರ್ದೇಶಕ ಡಾ.ರಾಜಣ್ಣ, ಶಸ್ತ್ರ ಚಿಕಿತ್ಸಕ ಡಾ.ರಾಘವೇಂದ್ರ ಪ್ರಸಾದ್ ಮೊದಲಾದವರಿದ್ದರು.

# ಅಗ್ರಹಾರ ಜಾಗ ವಿವಾದ ಕಾನೂನು ವ್ಯಾಪ್ತಿಯಲ್ಲೇ ಬಗೆಹರಿಸಿ : ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಸಕಲೇಶಪುರ: ಪಟ್ಟಣದ ಅಗ್ರಹಾರ ಬಡಾವಣೆಯಲ್ಲಿ ಉದ್ಭವಿಸಿರುವ ವಿವಾದಾತ್ಮಕ ಜಾಗದ ಸಮಸ್ಯೆಯನ್ನು ಕಾನೂನು ವ್ಯಾಪ್ತಿಯಲ್ಲೇ ಬಗೆಹರಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ವಾರ್ಡ್ ನಂ. 4ರ ಬಸವನಹಳ್ಳಿ ಹಾಗೂ ಅಗ್ರಹಾರ ವ್ಯಾಪ್ತಿಯ ಜಾಗವೊಂದರ ಮಾಲೀಕತ್ವ ಕುರಿತು ವಿವಾದ ಉಂಟಾಗಿರುವ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಅವರು ಮಾತುಕತೆ ನಡೆಸಿದರು.

ಬಸವನಹಳ್ಳಿ ಸಮೀಪದ ಖಾಲಿ ಜಾಗವೊಂದು ತಮ್ಮದಾಗಿದೆ ಎಂದು ಕೆಲವರು ಶೆಡ್ ನಿರ್ಮಿಸಿದ್ದು, ಇದಕ್ಕೆ ಮತ್ತೊಂದು ವಲಯದವರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಲಾಗಿದೆ. ತಾಲೂಕು ಆಡಳಿತದಿಂದ ಸರ್ವೆ ನಡೆಸಿ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

''ದಾಖಲೆಗಳ ಆಧಾರದ ಮೇಲೆ ಸಮಸ್ಯೆ ಬಗೆಹರಿಯಲಿದೆ. ನಾನು ಕ್ಷೇತ್ರದ ಶಾಸಕನಾಗಿ ಪ್ರಾಮಾಣಿಕ ಹಾಗೂ ಕಾನೂನುಬದ್ಧ ರೀತಿಯಲ್ಲಿ ಸಮಸ್ಯೆ ಪರಿಹಾರಕ್ಕೆ ಆದ್ಯತೆ ನೀಡುತ್ತೇನೆ. ಯಾರೂ ಸಹ ಕಾನೂನನ್ನು ಕೈಗೆತ್ತಿಕೊಂಡು ಶಾಂತಿ ಭಂಗಕ್ಕೆ ಮುಂದಾಗಬಾರದು,'' ಎಂದು ಎಚ್ಚರಿಸಿದರು.

ಬಸವನಹಳ್ಳಿ ನಿವಾಸಿ ಮಧುಕುಮಾರ್ ಮಾತನಾಡಿ, ''ತಲೆತಲಾಂತರಗಳಿಂದ ನಾವು ಈ ಜಾಗದ ಮಾಲೀಕತ್ವ ಹೊಂದಿದ್ದೇವೆ. ಕೆಲವರು ಸುಳ್ಳು ದಾಖಲೆಗಳನ್ನು ತಂದು ಈ ಜಾಗ ಹರಿಜನ ಕೇರಿಗೆ ಸೇರಿದೆ ಎಂದು ಹೇಳಿ ಅಕ್ರಮವಾಗಿ ಶೆಡ್ ನಿರ್ಮಿಸಿದ್ದಾರೆ. ನಮ್ಮ ಬಳಿ ಎಲ್ಲಾ ಮೂಲ ದಾಖಲೆಗಳಿವೆ. ಗ್ರಾಮಠಾಣೆ ಜಾಗವಿದ್ದರೆ ಅದನ್ನು ಗ್ರಾಮದ ಅಭಿವೃದ್ಧಿಗೆ ಬಳಸಬೇಕು. ನಿವೇಶನ ವಿತರಣೆ ಮಾಡುವುದಾದರೆ ಸಕಲೇಶಪುರದಲ್ಲಿರುವ ಎಲ್ಲಾ ಸರ್ಕಾರಿ ಜಾಗಗಳನ್ನೂ ನಿವೇಶನರಹಿತರಿಗೆ ನೀಡಬೇಕು,'' ಎಂದು ಆಗ್ರಹಿಸಿದರು.

ಬಿಎಸ್‌ಪಿ ಮುಖಂಡ ಹರೀಶ್ ಅತ್ನಿ ಮಾತನಾಡಿ, ''ಬಸವನಹಳ್ಳಿಯಲ್ಲಿ ದಲಿತರಿಗಾಗಿ 20 ಗುಂಟೆ ಜಾಗ ಮೀಸಲಿಡಲಾಗಿತ್ತು. ಆದರೆ ಪ್ರಭಾವಿಗಳು ನಕಲಿ ಹಕ್ಕುಪತ್ರ ಸೃಷ್ಟಿಸಿ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ದಲಿತರು ಶೆಡ್ ನಿರ್ಮಿಸಿಕೊಂಡ ಹಿನ್ನೆಲೆಯಲ್ಲಿ ಕೆಲವರು ಮಾರಕಾಸ್ತ್ರಗಳಿಂದ ಬೆದರಿಕೆ ಹಾಕಿದ್ದಾರೆ. ದಲಿತರಿಗೆ ಮೀಸಲಾದ ಜಾಗವನ್ನು ದಲಿತರಿಗೆ ನೀಡಬೇಕು. ಜೊತೆಗೆ ಗ್ರಾಮಠಾಣೆ ಜಾಗವನ್ನು ನಿವೇಶನರಹಿತರಿಗೆ ಹಂಚಿಕೆ ಮಾಡಬೇಕು,'' ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ವಕೀಲ ಸುಧೀಶ್, ಬಸವನಹಳ್ಳಿ ಧರ್ಮೇಶ್, ಬಿಎಸ್‌ಪಿ ತಾಲೂಕು ಅಧ್ಯಕ್ಷ ವಿರೇಶ್, ಮುಖಂಡ ಶಾಂತು ಅಗ್ರಹಾರ ಸೇರಿದಂತೆ ಬಸವನಹಳ್ಳಿ ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು.

# ಇಂದಿನ ಪೀಳಿಗೆಯಲ್ಲಿ ಶಿಕ್ಷಕರು ಸಂತೋಷವಾಗಿದ್ದಾರೆಯೇ?



**ಅಂತೋಣಿ ಮುತ್ತು ವಿ**
**ಶಿಕ್ಷಕರು, 7259675543**

ಇಂದಿನ ಪೀಳಿಗೆಯಲ್ಲಿ ಶಿಕ್ಷಕರು ಸಂತೋಷವಾಗಿದ್ದಾರೆಯೇ ಎಂಬ ಪ್ರಶ್ನೆ ಸಮಾಜದಲ್ಲಿ ಹೆಚ್ಚಾಗಿ ಚರ್ಚೆಯಾಗುತ್ತಿದೆ. ಶಿಕ್ಷಕರು ಸಮಾಜದ ಶಿಲ್ಪಿಗಳು, ದೇಶದ ಭವಿಷ್ಯವನ್ನು ರೂಪಿಸುವ ಮಹತ್ವದ ವ್ಯಕ್ತಿಗಳು ಎಂದು ಹೇಳಲಾಗುತ್ತದೆ.ಹಿಂದೆ ಶಿಕ್ಷಕರಿಗೆ ಅಪಾರ ಗೌರವ ಮತ್ತು ಮಾನ್ಯತೆ ಇತ್ತು. ವಿದ್ಯಾರ್ಥಿಗಳು ಶಿಕ್ಷಕರನ್ನು ದೇವರ ಸಮಾನವಾಗಿ ಕಾಣುತ್ತಿದ್ದರು.ಆದರೆ ಇಂದಿನ ಕಾಲದಲ್ಲಿ ಪರಿಸ್ಥಿತಿ ಬಹಳಷ್ಟು ಬದಲಾಗಿದೆ.

ಅನೇಕ ಶಿಕ್ಷಕರು ತಮ್ಮ ವೃತ್ತಿಯಲ್ಲಿ ಸಂಪೂರ್ಣ ಸಂತೋಷವಾಗಿಲ್ಲ ಎನ್ನುವುದು ಕಂಡುಬರುತ್ತಿದೆ. ಇದರ ಪ್ರಮುಖ ಕಾರಣಗಳಲ್ಲಿ ಗೌರವದ ಕೊರತೆ,ಹೆಚ್ಚಾದ ಕೆಲಸದ ಒತ್ತಡ,ಕಡಿಮೆ ಸಂಬಳ ಮತ್ತು ತಂತ್ರಜ್ಞಾನದ ಸವಾಲುಗಳು ಸೇರಿವೆ.

ಇಂದಿನ ಶಿಕ್ಷಕರು ಕೇವಲ ಪಾಠ ಹೇಳುವುದಲ್ಲದೆ ದಾಖಲೆ ಕೆಲಸ,ಪರೀಕ್ಷಾ ಕಾರ್ಯ, ಆನ್‌ಲೈನ್ ವರದಿಗಳು ಮತ್ತು ಆಡಳಿತಾತ್ಮಕ ಜವಾಬ್ದಾರಿಗಳನ್ನು ಕೂಡ ನಿರ್ವಹಿಸಬೇಕಾಗಿದೆ. ಇದರಿಂದ ಅವರಿಗೆ ವಿಶ್ರಾಂತಿ ಮತ್ತು ವೈಯಕ್ತಿಕ ಜೀವನಕ್ಕೆ ಸಮಯ ಕಡಿಮೆಯಾಗುತ್ತದೆ. ವಿಶೇಷವಾಗಿ ಕೆಲವು ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಪರಿಶ್ರಮಕ್ಕೆ ತಕ್ಕ ಸಂಬಳ ಸಿಗುವುದಿಲ್ಲ.ಇದರಿಂದ ಅವರಲ್ಲಿ ಅಸಮಾಧಾನ ಹೆಚ್ಚುತ್ತದೆ.ಜೊತೆಗೆ ಡಿಜಿಟಲ್ ಶಿಕ್ಷಣ ಮತ್ತು ಆನ್‌ಲೈನ್ ತರಗತಿಗಳ ಬೆಳವಣಿಗೆಯಿಂದ ಶಿಕ್ಷಕರು ಹೊಸ ತಂತ್ರಜ್ಞಾನವನ್ನು ಕಲಿಯಬೇಕಾದ ಪರಿಸ್ಥಿತಿ ಉಂಟಾಗಿದೆ.

ಈ ಎಲ್ಲ ಕಾರಣಗಳಿಂದ ಅನೇಕ ಯುವಕರು ಶಿಕ್ಷಕರ ವೃತ್ತಿಯನ್ನು ಆಯ್ಕೆ ಮಾಡಲು ಮುಂದೆ ಬರುತ್ತಿಲ್ಲ.ಇಂದಿನ ಯುವಕರು ಹೆಚ್ಚು ಸಂಬಳ, ವೇಗವಾದ ಬೆಳವಣಿಗೆ ಮತ್ತು ಐಶಾರಾಮಿ ಜೀವನವನ್ನು ಬಯಸುತ್ತಾರೆ.ಆದ್ದರಿಂದ ಅವರು ಐಟಿ,ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ವ್ಯಾಪಾರ ಕ್ಷೇತ್ರಗಳನ್ನು ಹೆಚ್ಚು ಆಯ್ಕೆ ಮಾಡುತ್ತಿದ್ದಾರೆ. ಕೆಲವರು ಶಿಕ್ಷಕರ ವೃತ್ತಿಯಲ್ಲಿ ಬೆಳವಣಿಗೆಯ ಅವಕಾಶ ಕಡಿಮೆ ಇದೆ ಎಂದು ಭಾವಿಸುತ್ತಾರೆ.ಇನ್ನೂ ಕೆಲವರು ಶಿಕ್ಷಕರಿಗೆ ಸಮಾಜದಲ್ಲಿ ಹಿಂದಿನಷ್ಟು ಗೌರವ ಸಿಗುವುದಿಲ್ಲ ಎಂದುಕೊಳ್ಳುತ್ತಾರೆ.

ಆದರೂ ಶಿಕ್ಷಕರ ಮಹತ್ವ ಎಂದಿಗೂ ಕಡಿಮೆಯಾಗುವುದಿಲ್ಲ. ವೈದ್ಯರು,ವಿಜ್ಞಾನಿಗಳು, ಇಂಜಿನಿಯರ್‌ಗಳು, ನ್ಯಾಯಾಧೀಶರು ಮತ್ತು ಅಧಿಕಾರಿಗಳು ಎಲ್ಲರೂ ಶಿಕ್ಷಕರಿಂದಲೇ ಶಿಕ್ಷಣ ಪಡೆದವರಾಗಿದ್ದಾರೆ.ಶಿಕ್ಷಕರು ವಿದ್ಯಾರ್ಥಿಗಳ ಜೀವನವನ್ನು ರೂಪಿಸಿ,ಉತ್ತಮ ನಾಗರಿಕರನ್ನು ನಿರ್ಮಿಸುತ್ತಾರೆ. ಆದ್ದರಿಂದ ಶಿಕ್ಷಕರಿಗೆ ಉತ್ತಮ ಗೌರವ,ಸಮರ್ಪಕ ಸಂಬಳ ಮತ್ತು ಉತ್ತಮ ಸೌಲಭ್ಯಗಳನ್ನು ನೀಡಬೇಕು. ಸರ್ಕಾರ ಮತ್ತು ಸಮಾಜ ಶಿಕ್ಷಕರಿಗೆ ಬೆಂಬಲ ನೀಡಿದರೆ, ಭವಿಷ್ಯದಲ್ಲಿ ಹೆಚ್ಚು ಪ್ರತಿಭಾವಂತ ಯುವಕರು ಶಿಕ್ಷಕರ ವೃತ್ತಿಯನ್ನು ಆಯ್ಕೆ ಮಾಡುವರು.ಶಿಕ್ಷಕರನ್ನು ಗೌರವಿಸುವ ಸಮಾಜವೇ ನಿಜವಾದ ಅಭಿವೃದ್ಧಿಯತ್ತ ಸಾಗುತ್ತದೆ.

# ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**




ಹಾಸನ: ರಾಜ್ಯದಲ್ಲಿ ನೂತನ ಮುಖ್ಯಮಂತ್ರಿ ಜೊತೆಗೆ ಇಡೀ ಸಚಿವ ಸಂಪುಟ ಪುನಾರಚನೆ ಆಗುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಕೆ.ಎಚ್.ಮುನಿಯಪ್ಪ ಅವರನ್ನು ಅವಕಾಶ ಇದ್ದರೆ ಮುಖ್ಯಮಂತ್ರಿ ಮಾಡಬೇಕು. ಇಲ್ಲವಾದರೆ ಡಿಸಿಎಂ ಮಾಡಬೇಕು ಎಂದು ಕರ್ನಾಟಕ ಮಾದಾರ ಮಹಾಸಭಾದ ಜಿಲ್ಲಾಧ್ಯಕ್ಷ ಟಿ.ಆರ್.ವಿಜಯಕುಮಾರ್ ಒತ್ತಾಯಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುನಿಯಪ್ಪ ಅವರು ಕಾಂಗ್ರೆಸ್ ಕಟ್ಟಾಳು ಆಗಿದ್ದಾರೆ. 7 ಬಾರಿ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿದ್ದರು. 2 ಬಾರಿ ಕೇಂದ್ರದಲ್ಲಿ ಸಚಿವರೂ ಆಗಿದ್ದರು. ಅದಾದ ಬಳಿಕ ಈಗ ರಾಜ್ಯ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾಗಿದ್ದಾರೆ.

ಸೇವಾ ಹಿರಿತನದ ಆಧಾರದ ಮೇಲೆ ಕೆಪಿಸಿಸಿ ಮತ್ತು ಎಐಸಿಸಿ ಈ ವೇಳೆಗಾಗಲೇ ಮುನಿಯಪ್ಪ ಅವರನ್ನು ಮುಖ್ಯಮಂತ್ರಿ ಮಾಡಬೇಕಿತ್ತು. ಆ ಅರ್ಹತೆಗಳು ಸಿದ್ದರಾಮಯ್ಯ ಅವರಿಗಿದೆ ಎಂದರು.

ಇದೀಗ ಸಿಎಂ ಸಿದ್ದರಾಮಯ್ಯ ಅವರ ರಾಜೀನಾಮೆ ನಂತರ ದಲಿತರನ್ನು ಸಿಎಂ ಮಾಡುವ ಪ್ರಸ್ತಾಪ ಇದ್ದರೆ, ಮುನಿಯಪ್ಪ ಅವರನ್ನು ಹೆಸರನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಒಳ ಮೀಸಲಾತಿ ಪರವಾಗಿ, ಸಾಮಾಜಿಕ ನ್ಯಾಯದ ಪರವಾಗಿ, ಎಲ್ಲ ವರ್ಗಗಳ ಧ್ವನಿಯಾಗಿ ಕೆಲಸ ಮಾಡಿಕೊಂಡು ಮುನಿಯಪ್ಪ ಬಂದಿದ್ದಾರೆ. ರಾಜ್ಯದ ಮೂಲೆ ಮೂಕೆಗಳಲ್ಲೂ ಇವರ ಅಭಿಮಾನಿಗಳಿದ್ದಾರೆ.

ಮಾದಿಗ ಸಮುದಾಯದ ಪ್ರತಿನಿಧಿಯಾಗಿ ಪಕ್ಷಾತೀತ, ವರ್ಗಾತೀತವಾಗಿ ಮತ್ತು ಜಾತ್ಯಾತೀತವಾಗಿ ನಡೆದುಕೊಂಡಿರುವ ಮುನಿಯಪ್ಪ ಅವರಿಗೆ ಡಿಸಿಎಂ ಜೊತೆಗೆ ಇಂಧನ, ಕಂದಾಯ, ಲೋಕೋಪಯೋಗಿ,ಸಮಾಜ ಕಲ್ಯಾಣ ಇವುಗಳನ್ನು ಯಾವುದಾದರೊಂದು ಪ್ರಬಲ ಖಾತೆ ಕೊಡಬೇಕು ಎಂದು ಆಗ್ರಹಿಸಿದರು.

ಈಗಾಗಲೇ ಬಿಜೆಪಿಯಲ್ಲಿ ಗೋವಿಂದ ಕಾರಜೋಳ ಅವರನ್ನು ಉಪ ಮುಖ್ಯಮಂತ್ರಿ ಮಾಡಲಾಗಿದೆ. ಕಾಂಗ್ರೆಸ್‌ನಲ್ಲಿ ಡಾ.ಜಿ.ಪರಮೇಶ್ವರ್ ಅವರನ್ನು ಡಿಸಿಎಂ ಮಾಡಲಾಗಿದೆ. ಅಂತೆಯೇ ಈಗ ಮಾದಿಗ ಸಮುದಾಯಕ್ಕೆ ಸೇರಿದ ಮುನಿಯಪ್ಪ ಅವರಿಗೆ ಪ್ರಸ್ತುತ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಮಾಡುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿಯಬೇಕು. ಆ ಮೂಲಕ ಪಕ್ಷದ ಬಲವರ್ಧನೆಗೆ ಅವಕಾಶ ಮಾಡಿಕೊಡಬೇಕು ಎಂದು ವಿನಂತಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಟಿ.ವೀರಭದ್ರಪ್ಪ, ವೀರಭದ್ರಪ್ಪ, ವಸಂತಮ್ಮ, ಅಡಗೂರು ರಂಗಪ್ಪ ಇದ್ದರು.

# ಸೌಹಾರ್ದತೆ ಸಂದೇಶ ಸಾರಿದ ಸಂಸದ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹೊಳೆನರಸೀಪುರ: ಇಂದು ನಾಡಿನಾದ್ಯಂತ ಮುಸ್ಲಿಂ ಬಾಂಧವರು ಬಕ್ರೀದ್ (ತ್ಯಾಗ ಬಲಿದಾನದ ಸಂಕೇತವಾದ ಈದ್-ಉಲ್-ಅದ್ಹಾ) ಹಬ್ಬವನ್ನು ಶ್ರದ್ಧೆ ಹಾಗೂ ಸೌಹಾರ್ದತೆಯಿಂದ ಆಚರಿಸಿದರು.ಈ ವಿಶೇಷ ಸಂದರ್ಭದಲ್ಲಿ ಸಂಸದ ಶ್ರೇಯಸ್ ಎಂ.ಪಟೇಲ್ ಭಾಗಿಯಾಗಿ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದರು..

ಬಾಗಿವಾಳು ಕ್ರಾಸ್ ಹಾಸನದ ಮುಖ್ಯ ರಸ್ತೆ ಪಕ್ಕದಲ್ಲಿ ಇರುವ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಕ್ರೀದ್ ಹಬ್ಬವು ಕೇವಲ ಆಚರಣೆಯಲ್ಲ, ಅದು ತ್ಯಾಗ ಮತ್ತು ಸಮರ್ಪಣಾ ಮನೋಭಾವದ ಸಂಕೇತವಾಗಿದೆ. ಈ ಪವಿತ್ರ ದಿನದಂದು ನಾವೆಲ್ಲರೂ ಸೇರಿ ನಾಡಿನ ಮತ್ತು ದೇಶದ ಶಾಂತಿ, ಸೌಹಾರ್ದತೆ ಹಾಗೂ ಅಭಿವೃದ್ಧಿಗಾಗಿ ಪ್ರಾರ್ಥಿಸೋಣ ಎಂದು ಕರೆ ನೀಡಿದರು.




# ನಾ ತಂದಿನಿ ನಿನ್ನ ನನ್ನನ್ಯಾಕ ನೋಡತಿ ಹೊಳ್ಳೊಳ್ಳಿ

**-ಗೊರೂರು ಅನಂತರಾಜು, ಹಾಸನ.**

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 51 ಕೃತಿಗಳನ್ನು ಪ್ರಕಟಿಸಿರುವ ಡಾ. ಪ್ರಕಾಶ್ ಗ. ಖಾಡೆ ವಿದ್ಯಾರ್ಥಿ ದೆಸೆಯಲ್ಲಿಯೇ 1986ರಲ್ಲಿ ಗೀತ ಚಿಗಿತ ಸಂಪಾದಿತ ಕವನ ಸಂಕಲನದಿಂದ ಇತ್ತೀಚಿನ ಬಾಳುಕನ ಪುರಾಣ ಕಥಾ ಸಂಕಲನದವರಗೂ ದಣಿವರಿಯದೇ ಬರೆಯುತ್ತಿದ್ದಾರೆ. ಇವರು ಮತ್ತು ಶಂಕರ ಬೈಚಬಾಳ ಇರ್ವರೂ ನನಗೆ ಪರಿಚಿತವಾದದ್ದು 2008ರಲ್ಲಿ ನಡೆದ ಮೈಸೂರು ದಸರಾ ಕವಿಗೋಷ್ಠಿಯಲ್ಲಿ. ಹಿಂದಿನ ರಾತ್ರಿ ನಾವು ಮೂವರು ಒಂದೇ ರೂಮಿನಲ್ಲಿ ಉಳಿದುಕೊಂಡಿದ್ದೆವು. ಮಾತು ಪರಿಚಯ ಸ್ನೇಹಕ್ಕೆ ತಿರುಗಿ ನಾನು ಆಗತಾನೇ (2007) ಪ್ರಕಟವಾಗಿದ್ದ ನನ್ನ ಕಾವೇರಿ ನದಿಯ ದಡದಲ್ಲಿ ಕೃತಿ ನೀಡಿದೆ. ಎಂ.ಎಸ್. ವೆಂಕಟರಾಮಯ ಬರೆದ ಮುನ್ನುಡಿ ಮೇಲೆ ಕಣ್ಣಾಡಿಸಿದರು ಖಾಡೆ.

'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ.. ಎಂದು ಕವಿ ವರ್ಣಿಸಿದ ರಮಣೀಯ ನಿಸರ್ಗ ಸೌಂದರ್ಯದ ಬೀಡಾದ ಕೊಡಗಿನ ಪಶ್ಚಿಮ ಘಟ್ಟ ಭಾಗವಾದ ಬ್ರಹ್ಮಗಿರಿಯ ತಪ್ಪಲಿನಲ್ಲಿ ತಲಕಾವೇರಿ ಎಂಬಲ್ಲಿನ ಬ್ರಹ್ಮಕುಂಡಿಕೆಯಲ್ಲಿ ಚಿಮ್ಮಿ ಉದ್ಭವವಾಗಿ ಮುಂದೆ ಹೊರಳಿ ಹರಿದು ಕರ್ನಾಟಕ ತಮಿಳುನಾಡು ರಾಜ್ಯಗಳಲ್ಲಿನ ಸುಮಾರು 802 ಕಿ.ಮೀ.ದೂರ ಕ್ರಮಿಸಿ ಬಂಗಾಳಕೊಲ್ಲಿ ಸೇರುವ ಕಾವೇರಿ ನದಿಯ ರೋಚಕತೆಯೇ 'ಕಾವೇರಿ ನದಿಯ ದಡದಲ್ಲಿ. ಲೇಖಕಮಿತ್ರ ಶ್ರೀ ಗೊರೂರು ಅನಂತರಾಜು ಈ ಕೃತಿಯನ್ನು ಅಧ್ಯಯನ ಯೋಗ್ಯ ಕೃತಿಯಷ್ಟೇ ಅಲ್ಲದೇ ಪ್ರವಾಸಿಗರ ಉತ್ತಮ ಕೈಪಿಡಿಯಾಗುವಂತೆ ರಚಿಸುವಲ್ಲಿ ಬಹಳ ಶ್ರಮವಹಿಸಿದ್ದಾರೆ... ಅನಂತರಾಜ್ ಸರ್, ನಾವು ಕವಿಗೋಷ್ಠಿ ಮುಗಿಸಿ ಬೆಳಿಗ್ಗೆ ತಲಕಾವೇರಿಗೆ ಹೋಗಿ ಬರೋಣವೇ ಎಂದು ಅಭಿಲಾಶೆ ವ್ಯಕ್ತಪಡಿಸಿದರು. ಸರಿ ನಾವು ತಲಕಾಡಿಗೆ ಟ್ರಿಪ್ ಹೊರಟೆವು. ಅಲ್ಲಿಯ ರಮ್ಯ ಸೌಂದರ್ಯ ನೋಡಿ ಕವಿಗಳೀರ್ವರು ಖುಷಿಯಾದರು. ಹೋಗ್ತ ಖಾಡೆ ತಮ್ಮ ಕೃಷ್ಣಾ ತೀರದ ಜನಪದ ಒಗಟುಗಳು ಕೃತಿ ಕೊಟ್ಟರು. ಒಗಟುಗಳು ಸಾಹಿತ್ಯಕ ಮೌಲ್ಯವನ್ನು ಒಳಗೊಂಡ ಜನಪದ ಸಾಹಿತ್ಯದ ಶ್ರೇಷ್ಠ ರಚನೆಗಳಾಗಿವೆ. ಭಾವ ಹೆಪ್ಪುಗಟ್ಟಿ ಗೀತೆಯಾಗುವಂತೆ, ಭಾವ ಬುದ್ಧಿಗಳ ರಸಾಯನದಿಂದ ಗಾದೆಯಾಗುವಂತೆ, ಬುದ್ಧಿ ಹರಳಗೊಂಡು ಒಗಟಾಗುತ್ತದೆ. ಒಗಟು ಎಂದರೆ ಜಟಿಲವಾದದ್ದು, ಗೋಜಲು ಗೋಜಲಾದದ್ದು, ಗೂಢವಾದದ್ದು, ಬುದ್ಧಿ ಪ್ರತಿಭೆಗಳ ಸಂಯೋಜಿತ ಸೃಷ್ಟಿಯಾದ ಸೃಷ್ಟಿಯಾದ ಸೌಂದರ್ಯ ಕಾರ್ಯಕಾರಣ ತರ್ಕ ಶಕ್ತಿಗಳನ್ನೊಳಗೊಂಡ, ಸಿಪ್ಪೆ ಸುಲಿಯುತ್ತಾ ತಿರುಳಿನ ನೆಡೆಗೆ ಸೆಳೆಯುವ ಅರ್ಥಾಪೇಕ್ಷಿಯಾದ ಪದಚಕ್ರವ್ಯೂಹವೇ ಒಗಟು.







ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ ಕುರಿತ ಪಿ.ಹೆಚ್.ಡಿ ಪ್ರಬಂಧಕ್ಕೆ ಡಾಕ್ಟರೇಟ್ ಪಡೆದಿರುವ ಡಾ. ಪ್ರಕಾಶ್ ಗ. ಖಾಡೆ ಕೃಷ್ಣ ನದಿ ತೀರದ ಹಳ್ಳಿಗಳಲ್ಲಿ ಹತ್ತಾರು ವರ್ಷ ಸುತ್ತಾಡಿ ಬೀಸುಕಲ್ಲಿನ ಮುಂದೆ ಕುಳಿತು ಹಾಡು ಹೇಳುತ್ತ ಬೆಳಗು ಮುಂಜಾನೆ ಅರ್ಧ ಚೀಲ ಜೋಳ ಬೀಸಿದರೂ ಕಾಳ ಮುಗಿದವ ನಮ್ಮ ಹಾಡು ಮುಗಿಲಿಲ್ಲ ಎಂಬಂತೆ ನಾವೆಷ್ಟೇ ಸಂಗ್ರಹಿಸಿದರೂ ಇನ್ನು ಉಳಿದುಕೊಂಡೆ ಇರುವ ಜಾನಪದ ಸಂಪತ್ತಿನ ಒಂದು ಭಾಗವಾಗಿರುವ ಕೃಷ್ಣ ತೀರದ ಜನಪದ ಒಗಟುಗಳು ಕೃತಿಯಲ್ಲಿ 305 ಒಗಟುಗಳನ್ನು 12 ಒಡಗತೆಗಳನ್ನು ಸಂಗ್ರಹಿಸಿದ್ದಾರೆ.ಒಗಟುಗಳು ಸಾಹಿತ್ಯಕ ಮೌಲ್ಯವನ್ನು ಒಳಗೊಂಡ ಜನಪದ ಸಾಹಿತ್ಯದ ಶ್ರೇಷ್ಠ ರಚನೆಗಳಾಗಿವೆ. ಒಗಟು ಪರಿಭಾವಿಸಿದಷ್ಟೂ ಅರ್ಥಪರೆ ಬಿಚ್ಚಿಕೊಳ್ಳುವ ಗುಣ ವಿಶೇಷದಿಂದ ಶ್ರೇಷ್ಠಕಾವ್ಯದ ನಿಲುವಿಗೇರುವ ಅಂಶಗಳನ್ನೂ ಹೊಂದಿವೆ. ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಒಗಟು ರೂಪಕ ಮೂಲವಾದದ್ದು. ಈ ಗುಣದಿಂದಲೇ ಅದು ಧ್ವನಿಪೂರ್ಣವಾಗುತ್ತದೆ. ಧ್ವನಿ ಸಂಕ್ಷಿಪ್ತತೆಗೆ ಸಾಧನವಾದ ಸಾಂಕೇತಿಕತೆಯನ್ನು ಅರಸುತ್ತದೆ. ಹೀಗೆ ಸಾಂಕೇತಿಕತೆಯಲ್ಲಿ ಅಭಿವ್ಯಕ್ತಿಗೊಂಡ ಸಂಕ್ಷಿಪ್ತ ಕಾವ್ಯವೇ ಒಗಟು.

' ನಾ ತಂದಿನಿ ನಿನ್ನ ನನ್ನನ್ಯಾಕ ನೋಡತಿ ಹೊಳ್ಳೊಳ್ಳಿ.. ಉತ್ತರ ಕರ್ನಾಟಕ ಭಾಷಾ ಸೊಗಡಿನ ಒಗಟಿಗೆ ಉತ್ತರ ಹುಡುಕುತ್ತಾ ಹೊರಟಲ್ಲಿ ಹೊಳೆದಿದ್ದು 'ಕನ್ನಡಿ'ಯಲ್ಲಿ. ಸ್ವತ: ಕವಿಯಾಗಿ ಪ್ರೀತಿ ಬಟ್ಟಲು ಕವನ ಸಂಕಲನ ಪ್ರಕಟಿಸಿರುವ ಪ್ರಕಾಶ ಗ.ಖಾಡೆ ಅವರ ಈ ಕೃತಿಗೆ ಗಂಗಮ್ಮ ಸೋಮಪ್ಪ ಬೊಮ್ಮಾಯಿ (ಹುಬ್ಬಳಿ) ಪ್ರತಿಷ್ಠಾನವು ಜಾನಪದ ಸಿರಿ ಪ್ರಶಸ್ತಿ ನೀಡಿದೆ. ಹಿರಿ ಹೊಳಿ ಎಂದೇ ಜನಪದದಲ್ಲಿ ರೂಢಿಗತವಾಗಿರುವ ಕೃಷ್ಣಾ ನದಿ ಉತ್ತರ ಕರ್ನಾಟಕದ ಜೀವನಾಡಿ. ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಮಹಾಬಲೇಶ್ವರದಲ್ಲಿ ಉಗಮಿಸಿ ಕರ್ನಾಟಕ ರಾಜ್ಯದ ಬೆಳಗಾವಿ, ಬಾಗಲಕೋಟೆ, ವಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಪ್ರವಹಿಸುತ್ತಿರುವ ಕೃಷ್ಣಾ ತೀರದ ಪ್ರದೇಶಗಳಲ್ಲಿ ಜಾನಪದದ ಸಿರಿ ಸೊಬಗು ತುಂಬಿ ತುಳುಕುತ್ತಿದೆ. ಜಾತ್ರೆ ಉತ್ಸವ ಹಬ್ಬ ಹರಿದಿನಗಳಲ್ಲಿ, ಜನರ ಧಾರ್ಮಿಕ ಆಚರಣೆ ನಡೆ ನುಡಿಗಳಲ್ಲಿ ಜಾನಪದದ ಒಡಲು ಬರಿದಾದುದೆ ಇಲ್ಲ. ಒಗಟು ಕೂಡ ಅಷ್ಟೇ. ಅಡ್ಡ ಬಡ್ಡ ಬಿದರ ಸೀಳಿ ಅವರ ಮನಿಕಡ್ಡಿ ಮ್ಯಾಲ ಅಂತರಂಗದ ಗುಡಿ. ಅರಕಟ್ಟಿ, ಮರಕಟ್ಟಿ ಸುತ್ತಲ ಹಳ್ಳಿಕಟ್ಟಿ ಸೂಳಿಭಾವಿ ಕಟ್ಟ ಇದನ್ನ ಒಡದವರಿಗೆ ಬಂಗಾರದ ಕಟ್ಟಿ, ಒಡೆಯಲ್ಲದವರಿಗೆ ಚಪ್ಪಲ ಜೋಡ ಕಟ್ಟಿ.. ಈ ಎರಡೂ ಒಗಟುಗಳಿಗೂ ಉತ್ತರ 'ತೇರು', ಊಹೆಯಿಂದ ಬಿಡಿಸಬೇಕಾದ ಹಾಸ್ಯ ವಿಡಂಬನೆ, ಭಾಷೆ ಹಾಗೂ ಸಾಹಿತ್ಯ ಸೌಂದರ್ಯದ ಅಂಶಗಳನ್ನು ರೂಡಿಸಿಕೊಂಡ ಒಗಟು ಎಲ್ಲ ವಯೋಮಾನದಲ್ಲೂ ಉಳಿದುಕೊಂಡು ಬಂದಿವೆ. ಮಕ್ಕಳಿಗೆ ಪ್ರಿಯವಾಗುವ ಒಗಟುಗಳು ಮಾನಸಿಕ ಶೈಸವಾವಸ್ಥೆಯ ನಿಗೂಢತೆಗಳೂ ಹೌದು ವಿವೇಚನೆಯೂ ಹೌದು. ಒಗಟು ಸಂಗ್ರಹದೊಂದಿಗೆ ಒಗಟು ಹೇಳಿದವರ ಹೆಸರು ವಿಳಾಸ ನೀಡಿ ಗ್ರಾಮ್ಯ ಪದಗಳಿಗೆ ಅರ್ಥಕೋಶವನ್ನು ಲೇಖಕರು ಕೊಟ್ಟಿದ್ದಾರೆ. ಡಜನ್ ಒಡಗತೆಯಲ್ಲಿ ಹೀಗೊಂದು ಒಂದ ಮುದುಕಿ ಮನಿಗೆ ಒಬ್ಬಾಕಿ ಹಿಂಡಿ ಬೇಡಾಕ ಬಂದ್ಲು. ಆಗ ಮುದುಕಿ ಮನಿಗಿ ಮತ್ತೊಬ್ಬ ಹಾಲು ಬೇಡಾಕ ಬಂದ. ಇಬ್ಬರಿಗೂ ಒಂದ ಉತ್ತರ.. ಹಿಂಡಿಲ್ಲಾ. ಒಗಟು ಮತ್ತು ಒಡತೆಗಳು ಟೈಂಪಾಸ್ ಕಡ್ಲೆಕಾಯಿಯಂತೆ ಪ್ರಿಯವಾಗುತ್ತವೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248